ದಿಃ 21-02-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಮುಂದುವರೆದ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ** : ವಾದಿಯ ಪರವಾಗಿ ಕುಮಾರಿ ಎಸ್ ಎಮ್ ಎಸ್ ವಕೀಲರಿಂದ.

ನಾನು ಈಗಾಗಲೇ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಜರು ಪಡಿಸಿ ನನ್ನ ಪರ ನಿಪಿ 1 ರಿಂದ ನಿಪಿ 10 ದಾಖಲೆಗಳನ್ನು ಗುರುತುಮಾಡಿಕೊಂಡಿದ್ದು ತದನಂತರ ಪ್ರತಿವಾದಿಗಳು ಪ್ರತಿವಾದ ಪತ್ರ ಸಲ್ಲಿಸಿದ್ದು , ನ್ಯಾಯಾಲಯ ವಿವಾದಾಂಶಗಳನ್ನು ರಚಿಸಿದ್ದು ಈ ಬದಲಾದ ಸನ್ನಿವೇಶದಲ್ಲಿ ಇಂದು ನಾನು ನನ್ನ ಹೆಚ್ಚುವರಿ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಹಾಜರುಪಡಿಸಿದು ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿದ್ದು , ಅವುಗಳಿಗೆ ನಾನೇ ಮಾಹಿತಿ ನೀಡಿದ್ದು ಅದನ್ನು ಕೇಳಿ ತಿಳಿದುಕೊಂಡು ನಂತರ ಅದಕ್ಕೆ ನನ್ನ ಸಹಿಯನ್ನು ಮಾಡಿರುತ್ತೇನೆ .

ಇಂದು ನಾನು ದಿನಾಂಕ 02-12-2020 ರ ನೋಟಿಸಿನ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 11 ಎಂದು, ಒಟ್ಟು 4 ಅಂಚೆ ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ 12 ಎಂದು, 2 ಭಾವಚಿತ್ರಗಳನ್ನು ಮತ್ತು 1 ಸಿಡಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 13 ರಿಂದ 15 ಎಂದು, ಹಳಿಯಾಳ ಪೋಲಿಸ್ ಠಾಣಾಧಿಕಾರಿ ನೀಡಿದ ಠಾಣಾ ಗುನ್ನಾ ನಂಬರ 219/20 ರ ಪ್ರಥಮ ವರ್ತಮಾನ ವರದಿ ಮತ್ತು ದೂರನ್ನು ಒಟ್ಟಾರೆಯಾಗಿ ನಿಪಿ 16 ಎಂದು, 2 ಭಾವಚಿತ್ರಗಳನ್ನು, 1 ಸಿಡಿ ಹಾಗೂ ಅದಕ್ಕೆ ಸಂಬಂಧಿಸಿದ 1 ರಸೀದಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 17 ರಿಂದ 20 ಎಂದು, 2 ಭಾವಚಿತ್ರಗಳನ್ನು ಹಾಗೂ 1 ಸಿಡಿಯನ್ನು ಹಾಜರುಪಡಿಸಿದ್ದು ಕ್ರಮವಾಗಿ ನಿಪಿ 21 ರಿಂದ 23 ಎಂದು, ಎಫ್ ಡಿ ಪಿ 5/2019 ರಲ್ಲಿ ಸಲ್ಲಿಸಿದ ನೀಡಿದ ಕೊರ್ಟ ಕಮೀಷನರ್ ವರದಿಯ ದೃಡಿಕೃತ ನಕಲನ್ನು( ಒಟ್ಟು 7 ಹಾಳೆಗಳು) ಹಾಜರುಪಡಿಸಿದ್ದು ಅದನ್ನು ಒಟ್ಟರೆಯಾಗಿ ನಿಪಿ 24 ಎಂದು, ದಿನಾಂಕ 29-01-2021 ರಂದು ಹಳಿಯಾಳ ಪೋಲಿಸ್ ವೃತ್ತ ನಿರೀಕ್ಷಕರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 25 ಎಂದು ಗುರುತಿಸಲಾಯಿತು. ಆದ್ದರಿಂದ ಈ ದಾವೆಯನ್ನು ನಾವು ಕೋರಿದಂತೆ ಡಿಕ್ರಿ ಮಾಡಲು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲು** : ಪ್ರತಿವಾದಿ ಪರ ಶ್ರೀ ಆರ್ ಎಮ್ ಸಿ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ.)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರ.ದ.ನ್ಯಾದಂ., ಹಳಿಯಾಳ.